**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ.**

**ಸೆಷನ್ಸ್ ಕೇಸ್ ನಂಃ 31/2015** **ಅಸಾ.4**

**ಚಾಸಾ.1**

| | | |
|---|---|---|
| ಸಾಕ್ಷಿದಾರರ ಹೆಸರು | - | ವಿಶ್ವನಾಥ |
| ತಂದೆಯ ಹೆಸರು | - | ಮುದ್ದು |
| ವಯಸ್ಸು | - | 42 ವರ್ಷ |
| ಉದ್ಯೋಗ | - | ಎಚ್.ಸಿ.1125, ಮಲ್ಪೆಪೋಲಿಸ್ ಠಾಣೆ |
| ವಿಳಾಸ | - | ಮಲ್ಪೆ |

ದಿನಾಂಕಃ 06.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ :**

1. ನಾನು 2013 ರಿಂದ 2019 ಡಿಸೆಂಬರ್ ರವರೆಗೆ ಉಡುಪಿ ನಗರ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ಚಾಸಾ6 ಗೃಹರಕ್ಷಕನಾಗಿ ನಮ್ಮ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದರು. ದಿನಾಂಕ 27-05-2014 ರಂದು ನನಗೆ ಮತ್ತು ಚಾಸಾ6 ರಮೇಶ್ ಗೃಹರಕ್ಷಕರಿಗೆ ರಾತ್ರಿ ಗಸ್ತು ಕೆಲಸಕ್ಕೆ ನೇಮಿಸಿರುತ್ತಾರೆ. ರಾತ್ರಿ 1-25 ಗಂಟೆಗೆ ನಾವು ಗಸ್ತು ಕರ್ತವ್ಯದಲ್ಲಿದ್ದಾಗ ಎಸ್.ಪಿ. ಕಚೇರಿ ನಿಸ್ತಂತು ಕೊಠಡಿಯಿಂದ ಯಸ್ಟೀಮ್ ಕಾರು ನಂ.ಕೆಎ-19-ಎನ್-8448 ರಲ್ಲಿ ಅಕ್ರಮವಾಗಿ ಜಾನುವಾರುಗಳನ್ನು ಸಾಗಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ನೀಡಿರುತ್ತಾರೆ. ನಂತರ ನಾವು ಉಡುಪಿ ಡಯಾನಾ ಟಾಕೀಸ್ ಬಳಿ ಗಸ್ತು ಸಂಚರಿಸುತ್ತಿರುವಾಗ ರಾತ್ರಿ 1-45 ಗಂಟೆಗೆ ಡಯಾನಾ ಕ್ರಾಸ್ ಬಳಿ ಒಂದು ವಾಹನ ಬರುತ್ತಿದ್ದುದನ್ನು ನೋಡಿ ನಮ್ಮ ಬಳಿ ಇದ್ದ ಲೈಟ್ ಬೆಳಕಿನಿಂದ ಸದ್ರಿ ವಾಹನವನ್ನು ನಾವು ಗುರುತಿಸಿ ವಾಹನವನ್ನು ನಿಲ್ಲಿಸಲು ತಿಳಿಸಿರುತ್ತೇವೆ. ಆಗ ಅವರು ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ವಾಹನವನ್ನು ನಿಲ್ಲಿಸಲು ಸೂಚನೆ ನೀಡಿದ್ದರೂ ಸಹಾ ವಾಹನವನ್ನು ನಿಲ್ಲಿಸದೇ ವಾಹನವನ್ನು ನಮ್ಮ ಮೇಲೆ ಹರಿಯ ಬಿಟ್ಟಿರುತ್ತಾರೆ. ಆಗ ನಾವು ಪಕ್ಕಕ್ಕೆ ಸರಿದು ತಪ್ಪಿಸಿಕೊಂಡಿರುತ್ತೇವೆ. ಆ ಕಾರಿನಲ್ಲಿ 2-3 ಜನರು ಇದ್ದರು. ಅವರನ್ನು ಟಾರ್ಚ್ ಲೈಟ್ ಮತ್ತು ಬೀದಿ ದೀಪದ ಸಹಾಯದಿಂದ ನೋಡಿರುತ್ತೇವೆ. ಸದ್ರಿಯವರನ್ನು ನೋಡಿದರೆ

ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ನಾಲ್ಕನೇ ಆರೋಪಿಯನ್ನು ಮತ್ತು ವಿ.ಸಿ.ಯಲ್ಲಿ ಕಾಣುವ ಆರೋಪಿ-1 ಮತ್ತು 2 ರವರನ್ನು ನೋಡಿ ಗುರುತಿಸಿರುತ್ತಾರೆ. ನಂತರ ಈ ಮಾಹಿತಿಯನ್ನು ಕಂಟ್ರೋಲ್ ರೂಂ ಗೆ ಮತ್ತು ಮೇಲಾಧಿಕಾರಿಗಳಿಗೆ ತಿಳಿಸಿರುತ್ತೇವೆ. ನಂತರ ಬೆಳಿಗ್ಗೆ 5-00 ಗಂಟೆಗೆ ಅಂದರೆ ದಿನಾಂಕ 28-05-2014 ರಂದು ಠಾಣೆಗೆ ಬಂದು ದೂರು ದಾಖಲಿಸಿರುತ್ತೇವೆ. ಸದ್ರಿ ದೂರನ್ನು ಈಗ ನೋಡುತ್ತಿದ್ದು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

2. ನಂತರ ದಿನಾಂಕ 28-05-2014 ರಂದು ಬೆಳಿಗ್ಗೆ 11-00 ಗಂಟೆಗೆ ತಕ್ಷೀರು ಸ್ಥಳಕ್ಕೆ ತನಿಖಾಧಿಕಾರಿ ಬಂದಿದ್ದರು. ನಾನು ಸ್ಥಳದಲ್ಲಿದ್ದು ಪೋಲಿಸರಿಗೆ ತಕ್ಷೀರು ಸ್ಥಳ ತೋರಿಸಿಕೊಟ್ಟಿರುತ್ತೇನೆ. ತಕ್ಷೀರು ಸ್ಥಳವು 76 ಬಡಗುಬೆಟ್ಟು ಗ್ರಾಮದ ಕುಕ್ಕಿಕಟ್ಟೆ ಡಯಾನಾ ಟಾಕೀಸ್ ಬಳಿ ಇರುತ್ತದೆ. ನಂತರ ತನಿಖಾಧಿಕಾರಿ ಚಾಸಾ2 ಮತ್ತು 3 ಇವರ ಸಮಕ್ಷಮ ಸ್ಥಳ ಪರಿಶೀಲಿಸಿ ಮಹಜರು ತಯಾರಿಸಿರುತ್ತಾರೆ. ಸದ್ರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಮಹಜರನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಆರೋಪಿತರು ನಮ್ಮ ಮೇಲೆ ಹಾಯಿಸಿದ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸದ್ರಿ ವಾಹನವನ್ನು ಗುರುತಿಸುವ ಬಗ್ಗೆ ಆರೋಪಿತರ ಪರ ವಕೀಲರಿಂದ ತಕರಾರು ಇರುವುದಿಲ್ಲ. ನಂತರ ದಿನಾಂಕ 27-10-2014 ರಂದು ಮೂರು ಜನ ಆರೋಪಿತರನ್ನು ಠಾಣೆಯಲ್ಲಿ ನೋಡಿ ಗುರುತಿಸಿ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟಿ ಸವಾಲುಃ ಆರೋಪಿ-2 ಮತ್ತು 3 ರವರ ಪರ ಶ್ರೀ ಎ.ಆರ್.ಆರ್ .ವಕೀಲರಿಂದಃ**

ಆ ದಿನ ನಾನು ಗಸ್ತಿಗೆ ಬೈಕಿನಲ್ಲಿ ಹೋಗಿರುತ್ತೇನೆ. ನಾನು ಆ ದಿನ ಬೀಡಿನಗುಡ್ಡೆ ಕಡೆಯಿಂದ ಡಯಾನಾ ಟಾಕೀಸ್ ಕಡೆಗೆ ಗಸ್ತಿಗೆ ಹೋಗುತ್ತಿದ್ದೆವು. ಬೈಕನ್ನು ನಾನು ಚಾಲನೆ ಮಾಡುತ್ತಿದ್ದೆ. ಕಾರು ಕುಕ್ಕಿಕಟ್ಟೆ ಕಡೆಯಿಂದ ನಮ್ಮ ಎದುರಿನಲ್ಲಿ ಬಂದಿರುತ್ತದೆ. ಸದ್ರಿ ಸ್ಥಳದಲ್ಲಿ ಇಂದಿರಾನಗರಕ್ಕೆ ಹೋಗಲು ಎರಡು ರಸ್ತೆಗಳು ಇರುತ್ತದೆ. ನಾವು ಆ ದಿನ ಬೀಡಿನಗುಡ್ಡೆ-ಡಯಾನಾ ಟಾಕೀಸ್ ರಸ್ತೆಯ ಎಡ ಭಾಗದಲ್ಲಿದ್ದೆವು. ಜಂಕ್ಷನ್ ನಿಂದ ಸುಮಾರು 10 ಅಡಿ ದೂರನಲ್ಲಿ ಬೈಕನ್ನು ನಿಲ್ಲಿಸಿದ್ದೆವು. ಆ ದಿನ ಕಾರನ್ನು ಹಿಂಬಾಲಿಸಿಕೊಂಡು ಬೈಕ್ ನಲ್ಲಿ ಹೋಗಲು ತೊಂದರೆ ಇರಲಿಲ್ಲ. ನಿಪಿ-3 ರಲ್ಲಿ ಕಾರಿನ ಮುಂದಿನ ಸೀಟಿನಲ್ಲಿ ಮತ್ತು ಹಿಂದಿನ ಸೀಟಿನಲ್ಲಿ ಎಷ್ಟು ಜನ ಕುಳಿತಿದ್ದರು ಎಂದು ನಮೂದು ಮಾಡಿಲ್ಲ. ನಿಪಿ-3 ರಲ್ಲಿ ಸದ್ರಿ ವ್ಯಕ್ತಿಗಳ ಪ್ರಾಯದ ಬಗ್ಗೆ ತಿಳಿಸಿಲ್ಲ. ನಾನು ಹೇಳಿದ ರೀತಿ ಪ್ರಕರಣದ ಕಾರು ಅಲ್ಲಿಗೆ ಬಂದಿಲ್ಲ ಎಂದರೆ ಸರಿಯಲ್ಲ. ರಾತ್ರಿ 1-50 ರ ಸಮಯದಲ್ಲಿ ಕಾರು ನಮ್ಮ ಮೇಲೆ

ಹರಿಯಲು ಬಂದ ಬಗ್ಗೆ ಠಾಣೆಯಲ್ಲಿ ತಿಳಿಸಿರುತ್ತೇನೆ. ನಾನು ಹೇಳುವ ಸ್ಥಳದಲ್ಲಿ ವಿದ್ಯುತ್ ಛಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಆ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನಿಪಿ-4 ನ್ನು ಠಾಣೆಯಲ್ಲಿ ತಯಾರಿಸಿ ಠಾಣೆಯಲ್ಲೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಆರೋಪಿತರನ್ನು ನೋಡಿಲ್ಲ ಎಂದರೆ ಸರಿಯಲ್ಲ. ಈ ಘಟನೆಯ ಪೂರ್ವದಲ್ಲಿ ಆರೋಪಿತರ ವಿರುದ್ಧ ಬೇರೆ ಬೇರೆ ಪ್ರಕರಣಗಳು ಇರುತ್ತವೆ. ಆರೋಪಿತರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದೂರು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾವು ಆ ದಿನ ಗಸ್ತಿಗೆ ಹೋಗಿಲ್ಲ ಮತ್ತು ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ತಕ್ಷೀರು ಸ್ಥಳದಿಂದ ತಕ್ಷೀರು ನಡೆದ ಕೂಡಲೇ ನಾನು ಠಾಣೆಗೆ ಹೋಗಿಲ್ಲ, ಬೆಳಿಗ್ಗೆ 5-00 ಗಂಟೆಗೆ ಕರ್ತವ್ಯಕ್ಕೆ ವರದಿ ಮಾಡಲು ಠಾಣೆಗೆ ಹೋಗಿರುತ್ತೇನೆ. ನನ್ನನ್ನು ಆ ದಿನ ಸದ್ರಿ ಸ್ಥಳದಲ್ಲಿ ಗಸ್ತಿಗೆ ನೇಮಕ ಮಾಡಿರಲಿಲ್ಲ ಎಂದರೆ ಸರಿಯಲ್ಲ.

**ಉಳಿದ ಆರೋಪಿ ಪರ ವಕೀಲರು ಮೇಲಿನ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.